**ಸಾಕ್ಷಿಯನ್ನು ದಿಃ 24.01.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಬಿ.ಎ.ಎಸ್ ವಕೀಲರ ಪರವಾಗಿ ಶ್ರೀ ಎ.ಕೆ.ಆರ್ ವಕೀಲರಿಂದಃ-**

ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಸಲ್ಲಿಸಲು ಮಾಹಿತಿಯನ್ನು ನಾನೆ ನೀಡಿರುತ್ತೇನೆ. ಅದರಲ್ಲಿ ಬರೆಸಿರುವ ವಿಚಾರಗಳನ್ನು ನಾನು ತಿಳಿದುಕೊಂಡಿರುತ್ತೇನೆ. ಈ ಕೇಸ್ ಅನ್ನು ಹೆಣ್ಣು ಮಕ್ಕಳು ನರಸಮ್ಮ, ರೇಣುಕಮ್ಮ, ಇನ್ನೊಬ್ಬರು, ಒಟ್ಟು ಮೂವರು ಹೆಣ್ಣು ಮಕ್ಕಳು ಅವರ ತಂದೆಯ ಆಸ್ತಿಗೆ ಸಲ್ಲಿಸಿರುತ್ತಾರೆ. ತಂದೆಯ ಆಸ್ತಿ ಬೇಕು ಎಂದು ಸದರಿ ಕೇಸ್ ಹಾಕಿರುತ್ತಾರೆ. ಈ ಕೇಸ್ ಗೂ ಮೊದಲು ಸಿವಿಲ್ ದಾವೆ ಹಾಕಿದ ವಿಚಾರ ನನಗೆ ಗೊತ್ತಿತ್ತು. ಆ ಕೇಸ್ ನಲ್ಲಿ ಸೇರ್ಪಡೆ ಆಗಲು ನನಗೆ ಯಾವುದೆ ತೊಂದರೆ ಇರಲಿಲ್ಲ. ಯಾವ ಯಾವ ಸರ್ವೆ ನಂಬರ್ ಗಳ ಮೇಲೆ ಕೇಸ್ ಹಾಕಿ ಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಪುನಃ ಅವರ ಜಮೀನುಗಳ ಸಂಬಂಧ ಕೇಸ್ ಹಾಕಿಕೊಂಡಿದ್ದರು ಎನ್ನುತ್ತಾರೆ. ಅವರ ತಂದೆಯ ಜಮೀನು ಪಕ್ಕದಲ್ಲಿ ನಮ್ಮ ಜಮೀನು ಇದ್ದು, ಅಳತೆಗೆ ಬಂದಾಗ ನಮ್ಮ ಜಮೀನು ಸೇರಿಸಿರುವುದು ಗೊತ್ತಾಯಿತು ಎನ್ನುತ್ತಾರೆ. ಸರ್ವೆ ನಂ. 34/3 ರ ಜಮೀನಿನ ಆರ್.ಟಿ.ಸಿ ಈಗ ಕೇಸ್ ಹಾಕಿಕೊಂಡಿರುವವರ ತಾಯಿ ಹೆಸರಿನಲ್ಲಿ ಇರುತ್ತದೆ ಎಂದು ತಿಳಿದುಕೊಂಡಿದ್ದೇನೆ. ಸರ್ವೆ ನಂ. 34/3 ರ ಜಮೀನು ನರಸಮ್ಮ ರವರ ಗಂಡ ಪುಟ್ಟಾಚಾರಿ ರವರಿಗೆ ಸೇರಿದ್ದು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ., ಹುಣಸೂರು.